ಮಾನ್ಯ ಅರಣ್ಯ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಹಾಸನ ಪಟ್ಟಣವು ಅಲೂರು ಅರಕಲಗೋಡು ಚೆನ್ನರಾಯಪಟ್ಟಣ ತಾಲ್ಲೂಕ್‌ಗಳಿಗೆ ಕೇಂದ್ರ ಸ್ಥಳವಾಗಿದ್ದು ಸದರಿ ತಾಲ್ಲೂಕ್‌ಗಳ ವ್ಯಾಪ್ತಿಗೆ ಬರುವ ಎ.ಸಿ.ಎಫ್ ಕಛೇರಿಯು ಚನ್ನರಾಯಪಟ್ಟಣದಲ್ಲಿದ್ದು ಇತರೆ ತಾಲ್ಲೂಕ್‌ಗಳಿಗೆ ಬಹಳ ದೂರದಲ್ಲಿರುವುದರಿಂದ ಸಾರ್ವಜನಿಕರಿಗೆ ಅನಾನುಕೂಲವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ;

ಆ) ಹಾಗಿದ್ದರೆ ಆ ಕಛೇರಿಯನ್ನು ಹಾಸನಕ್ಕೆ ವರ್ಗಾವಣೆ ಮಾಡಲಾಗುವುದೆ;

ಇ) ಆ ಬಗ್ಗೆ ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?

ಶ್ರೀ ಎಂ.ಪಿ.ಕೇಶವಮೂರ್ತಿ

(ಅರಣ್ಯ ರಾಜ್ಯಸಚಿವರು)

ಬಂದಿರುವುದಿಲ್ಲ.

ಆದರೆ ಹಾಸನ ವಿಭಾಗಕ್ಕೆ ಇನ್ನು ಒಂದು ಹೆಚ್ಚಿನ ಉಪ ವಿಭಾಗವನ್ನು ಹಾಸನ ಕೇಂದ್ರ ಸ್ಥಾನದಲ್ಲಿ ಸೃಷ್ಟಿಸುವ ಪ್ರಸ್ತಾವ ಪರಿಶೀಲನೆಯಲ್ಲಿದೆ. ಮೇಲಿನ ಕಂಡಿಕೆ (ಆ)ದ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ವಿಷಯ : – ಪ್ರಾಥಮಿಕ ಮತ್ತು ಪ್ರೌಢಶಾಲೆಗಳಲ್ಲಿ ಶಿಕ್ಷಕರುಗಳ ಕೊರತೆ.
ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 254(164)

ಶ್ರೀ ಬಿ.ಆರ್.ಗುರುದೇವ್(ಸಕಲೇಶಪುರ)

ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ. ಆಲೂರು ಮತ್ತು ಸಕಲೇಶಪುರ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಲ್ಲಿ ಶಿಕ್ಷಕರುಗಳ ಕೊರತೆಯಿಂದ ವಿದ್ಯಾರ್ಥಿಗಳಿಗೆ ಬಹಳ ಅನಾನುಕೂಲವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಆದರಿಂದಾಗಿ ಕಳೆದ ಸಾಲಿನಲ್ಲಿ ಕೆಲವು ಶಾಲೆಗಳಲ್ಲಿ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಶೇ.5ಕ್ಕಿಂತಲೂ ಫಲಿತಾಂಶ ಕಡಿಮೆ ಬಂದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ. ಹಾಗಿದ್ದಲ್ಲಿ, ಸರ್ಕಾರದವರು ಆ ಬಗ್ಗೆ ತೆಗೆದುಕೊಂಡಿರುವ ಕ್ರಮಗಳೇನು.

ಈ. ಆಲೂರು ಮತ್ತು ಸಕಲೇಶಪುರ ತಾಲ್ಲೂಕುಗಳಲ್ಲಿ ಖಾಲಿ ಇರುವ ಶಿಕ್ಷಕರುಗಳ ಹುದ್ದೆಗಳೆಷ್ಟು;(ವಿವರವನ್ನು ತಿಳಿಸುವುದು)

ಶ್ರೀಮತಿ. ನಾಗಮ್ಮ ಸಿ.ಕೇಶವಮೂರ್ತಿ

(ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು)

ಬಂದಿದೆ.

ಬಂದಿದೆ.

ಶಾಲೆಗಳಲ್ಲಿ ಅವಶ್ಯವಿರುವ ಹುದ್ದೆಗಳನ್ನು ನಿಯೋಜನೆಯ ಮೇಲೆ ತುಂಬಿ ಫಲಿತಾಂಶವನ್ನು ಉತ್ತಮ ಪಡಿಸಲು ಸೂಕ್ತ ಕ್ರಮ ಕೈಗೊಳ್ಳಲಾಗುವುದು. ಅಲ್ಲದೆ ಖಾಲಿ ಇರುವ ಹುದ್ದೆಗಳನ್ನು ಶೀಘ್ರವಾಗಿ ತುಂಬಲು ಕ್ರಮ ಕೈಗೊಳ್ಳಲಾಗುವುದು.

ಖಾಲಿಯಿರುವ ಶಿಕ್ಷಕರ ವಿವರ ಕೆಳಕಂಡಂತಿದೆ

	ಆಲೂರು ತಾಲ್ಲೂಕು	ಸಕಲೇಶಪುರ ತಾಲ್ಲೂಕು
ಖಾಲಿಯಿರುವ ಪ್ರಾಥಮಿಕ ಶಾಲಾ ಶಿಕ್ಷಕರಸಂಖ್ಯೆ	32	86
ಖಾಲಿಯಿರುವ ಪ್ರೌಢಶಾಲಾ ಶಿಕ್ಷಕರ ಸಂಖ್ಯೆ	30	30

ವಿಷಯ:- ಯು.ಜಿ.ಸಿ ವೇತನ ಶ್ರೇಣಿಗಳನ್ನು ಎಲ್ಲಾ ಖಾಸಗಿ ಕಾಲೇಜುಗಳ ಆಡಳಿತ ಮಂಡಳಿಗಳು ಅನುಷ್ಠಾನಕ್ಕೆ ತಂದಿರುವ ಬಗ್ಗೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 258(499)

ಶ್ರೀ ಸುಭಾಷ್ ಜೋಷಿ (ನಿಪ್ಪಾಣಿ)

ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) 1986ರಿಂದ ಯುಜಿಸಿ ವೇತನ ಶ್ರೇಣಿಗಳನ್ನು ಕಾಲೇಜಿನ ಉಪನ್ಯಾಸಕರುಗಳಿಗೆ ಅನುಷ್ಠಾನಗೊಳಿಸಲಾಗಿದೆಯೇ?

ಆ) ಯುಜಿಸಿ ವೇತನ ಶ್ರೇಣಿಗಳನ್ನು ಎಲ್ಲಾ ಖಾಸಗಿ ಕಾಲೇಜುಗಳ ಆಡಳಿತ ಮಂಡಳಿಗಳು ಅನುಷ್ಠಾನಕ್ಕೆ ತಂದಿರುವ ಬಗ್ಗೆ ಸರ್ಕಾರವು ಪರಿಶೀಲಿಸಿದೆಯೇ?

ಇ) ಈ ಬಗ್ಗೆಯಾವುದಾದರೂ ವಿಕೃತ ಪ್ರಕರಣಗಳು ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ) ಸರ್ಕಾರಿ ನಿಯಮಾವಳಿಗಳ ಪ್ರಕಾರ ಖಾಸಗೀ ಆಡಳಿತ ಮಂಡಳಿಗಳು ಯುಜಿಸಿ ವೇತನ ಶ್ರೇಣಿಯನ್ನು ಅಳವಡಿಸುವಲ್ಲಿ ಹಾಗೂ ಉಪನ್ಯಾಸಕರುಗಳಿಗೆ ಜ್ಯೇಷ್ಠತೆಯನ್ನು ನೀಡುವ ಬಗ್ಗೆ ಮಾರ್ಗ ಸೂಚಿಗಳನ್ನು ಉಲ್ಲಂಘಿಸದಂತೆ ಸರ್ಕಾರವು ತೆಗೆದುಕೊಂಡ ಕ್ರಮಗಳೇನು;

ಉ) ಯುಜಿಸಿ ವೇತನ ಶ್ರೇಣಿ ಅನ್ವಯ ಪ್ರತಿಯೊಂದು ಖಾಸಗೀ ಆಡಳಿತ ಮಂಡಳಿಯು ಅಧ್ಯಾಪಕವರ್ಗದವರ ಜೇಷ್ಠತಾ ಪಟ್ಟಿಯನ್ನು ಸಲ್ಲಿಸಿದ್ದಾರೆಯೇ?

ಊ) ಪ್ರತಿಯೊಂದು ಕಾಲೇಜುಗಳು ಆಯಾಯ ಕಾಲೇಜಿನ ಜ್ಯೇಷ್ಠತಾ ಪಟ್ಟಿಯನ್ನು, ವೇತನ ವಿತರಣಾ ಪಟ್ಟಿಯನ್ನು ತಯಾರಿಸುವಲ್ಲಿ ಯುಜಿಸಿ ಮಾದರಿಯನ್ನು ಅನುಸರಿಸುತ್ತಿವೆಯೆ?

ಶ್ರೀ ಎಸ್.ಎಂ.ಯಾಹ್ಯಾ

(ಉನ್ನತ ಶಿಕ್ಷಣ ಸಚಿವರು)

ಹೌದು.

ಹೌದು.

ಇಲ್ಲ.

ಯಾವುದೇ ಕಾಲೇಜಿನ ಆಡಳಿತಮಂಡಳಿಯು ಯಾವುದೇ ಸಂದರ್ಭದಲ್ಲಿ ಯುಜಿಸಿ ಮಾರ್ಗ ಸೂಚಿಗಳನ್ನು : ಸರ್ಕಾರ ವಿಧಿಸಿರುವ ಷರತ್ತುಗಳನ್ನು ಉಲ್ಲಂಘಿಸಲು ಆಸ್ಪದ ನೀಡಿರುವುದಿಲ್ಲ.

ಯುಜಿಸಿ ಮಾರ್ಗಸೂಚಿಗಳನ್ವಯ ಜೇಷ್ಠತೆಯನ್ನು ಸಿದ್ಧಪಡಿಸುವ ಬಗ್ಗೆ ಯಾವುದೇ ಅವಕಾಶಗಳಿರುವುದಿಲ್ಲ. ಆದ್ದರಿಂದ ಜ್ಯೇಷ್ಠತಾ ಪಟ್ಟಿಯನ್ನು ತಯಾರಿಸುವ ಪ್ರಶ್ನೆ ಉದ್ಭವಿಸುವುದಿಲ್ಲ.